ಕರ್ನಾಟಕ ಸರ್ಕಾರ

**ಸಾರ್ವಜನಿಕ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು-01**

ಸಂಖ್ಯೆ:ಅ1/ಪ್ರಾ.ಶಿ.ವರ್ಗ.01/2019-20 ದಿನಾಂಕ:24.10.2019

-::ಜ್ಞಾಪನ::-

ವಿಷಯ : 2018-19ನೇ ಸಾಲಿನ ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕ ವೃಂದದ ಅಂತರ ಘಟಕ (ವಿಭಾಗದ ಒಳಗೆ ಮತ್ತು ವಿಭಾಗದ ಹೊರಗಿನಸಮಗ್ರ ಪಟ್ಟಿಯಂತೆ) ವರ್ಗಾವಣಾ ಕೌನ್ಸಿಲಿಂಗ್‌ಗೆ ಕ್ರಮ ಸಂಖ್ಯೆವಾರು ಮುಂದುವರಿದ ವೇಳಾಪಟ್ಟಿ.

ಉಲ್ಲೇಖ : ಈ ಕಛೇರಿ ಜ್ಞಾಪನ ಸಮ ಸಂಖ್ಯೆ, ವಿವಿಧ ದಿನಾಂಕಗಳು ಮತ್ತು ದಿನಾಂಕ:17.10.2019

***

ವಿಷಯದನ್ವಯ ಉಲ್ಲೇಖಿತ ವೇಳಾಪಟ್ಟಿಗನುಸಾರ ನಡೆಯುತ್ತಿರುವ ಪ್ರಾಥಮಿಕ ಶಾಲಾ ಶಿಕ್ಷಕ ವೃಂದದ ಅಂತರ ಘಟಕ (ವಿಭಾಗದ ಒಳಗೆ ಮತ್ತು ವಿಭಾಗದ ಹೊರಗಿನ ಸಮಗ್ರ ಪಟ್ಟಿಯಂತೆ) ವರ್ಗಾವಣೆಗಳ ಮುಂದುವರೆದ ವೇಳಾಪಟ್ಟಿಯು ಕೆಳಗಿನಂತಿದೆ. ಸಂಬಂಧಿಸಿದ ಪ್ರಾಧಿಕಾರಿಗಳು ಈ ಕುರಿತು ಅಗತ್ಯ ಕ್ರಮವಹಿಸಲು ತಿಳಿಸಿದೆ. ವೇಳಾಪಟ್ಟಿಯಂತೆ ಶಿಕ್ಷಕರು ಕೌನ್ಸಿಲಿಂಗ್‌ಗೆ ಹಾಜರಾಗಲು ತಿಳಿಸಿದೆ.

ಅನಿವಾರ್ಯ ಕಾರಣಗಳಿಂದ ಕ್ರಮಸಂಖ್ಯೆವಾರು ಕೌನ್ಸಿಲಿಂಗ್ ಪ್ರಕ್ರಿಯೆ ಆಯಾ ದಿನಾಂಕಗಳಂದು ಪೂರ್ಣಗೊಳ್ಳದಿದ್ದಲ್ಲಿ, ಬದಲಾದ ದಿನಾಂಕಗಳನ್ನು ತಕ್ಷಣ ಪ್ರಕಟಿಸಲಾಗುವುದು.

ಹಾಗೆಯೇ, ವರ್ಗಾವಣಾ ಪ್ರಾಧಿಕಾರಿಯವರು ದಿನದ ಅಂತ್ಯದಲ್ಲಿ ಮುಂದಿನ ದಿನದ ಕೌನ್ಸಿಲಿಂಗ್‌ಗಾಗಿ ಲಭ್ಯವಿರುವ ಖಾಲಿ ಹುದ್ದೆಗಳ ಮಾಹಿತಿ ಹಾಗೂ ಶೇಕಡಾ 20ಕ್ಕಿಂತ ಹೆಚ್ಚಿನ ಖಾಲಿ ಹುದ್ದೆಗಳನ್ನು ಹೊಂದಿರುವ ತಾಲ್ಲೂಕುಗಳ ಮಾಹಿತಿಯನ್ನು ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಕ್ರಮಕೈಗೊಳ್ಳತಕ್ಕದ್ದು . ಹಾಗೆಯೇ " ಲಿಮಿಟ್ ಓವರ್ " ಆಗುವ ಜಿಲ್ಲೆಗಳ ಮಾಹಿತಯನ್ನು ಸಹ ಆಯಾ ದಿನಾಂಕಗಳಲ್ಲಿ ಶಿಕ್ಷಕರ ಅನುಕೂಲಕ್ಕೆ ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಕ್ರಮಕೈಗೊಳ್ಳತಕ್ಕದ್ದು.

ಯಾವುದೇ ದಿನಾಂಕದ ಯಾವುದೇ ಸಮಯದಲ್ಲಿ, ಆಯಾ ತಾಲ್ಲೂಕಿನ ಖಾಲಿ ಹುದ್ದೆಗಳ ಒಟ್ಟು ಪ್ರಮಾಣವು, ಶೇಕಡಾ 20ಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿದೆಯೇ ಎಂಬ ಮಾಹಿತಿಯನ್ನು ಇಲಾಖಾ ವೆಬ್‌ಸೈಟ್‌ನಲ್ಲಿ **"ಟೀಚರ್ ಅಪ್ಲಿಕೇಷನ್ ಸ್ಟೇಟಸ್"** ಲಿಂಕ್‌ನ ಮುಖಾಂತರದಲ್ಲಿ ಕೆ.ಜಿ.ಐ.ಡಿ ಸಂಖ್ಯೆಯನ್ನು ನಮೂದಿಸುವ ಮೂಲಕ ಶಿಕ್ಷಕರು ಮಾಹಿತಿಯನ್ನು ಪಡೆದುಕೊಳ್ಳಬಹುದಾಗಿದೆ. ಈ ಬಗ್ಗೆಯೂ ಪ್ರಾಧಿಕಾರಿಯವರು ಶಿಕ್ಷಕರ ಗಮನಕ್ಕೆ ಪ್ರಚುರಪಡಿಸತಕ್ಕದ್ದು.

| ಕ್ರಮ ಸಂಖ್ಯೆ | ದಿನಾಂಕ | ಸಮಯ | ಅಂತಿಮ ಆಧ್ಯತಾ ಪಟ್ಟಿಯಲ್ಲಿರುವ ಕ್ರಮ ಸಂಖ್ಯೆಗಳಂತೆ |
|---|---|---|---|
| ಸಹ ಶಿಕ್ಷಕರು | | | |
| 1 | 30.10.2019 ಬುಧವಾರ | ಬೆಳಿಗ್ಗೆ 9 ರಿಂದ | **9501 ರಿಂದ 10400ರ** ವರೆಗಿನ ಪ್ರಾಥಮಿಕ ಶಾಲಾ ಶಿಕ್ಷಕರು (ನಾಲ್ಕು ವಿಭಾಗಗಳು ಸೇರಿ) (ಕೌನ್ಸಿಲಿಂಗ್‌ಗೆ ಆಯ್ಕೆ ಮಾಡಿಕೊಂಡಿರುವ ಸ್ಥಳದಲ್ಲಿಯೇ ಅಭ್ಯರ್ಥಿಗಳು ಹಾಜರಾಗತಕ್ಕದ್ದು) |
| 2 | 31.10.2019 ಗುರುವಾರ | ಬೆಳಿಗ್ಗೆ 9 ರಿಂದ | **10401 ರಿಂದ 11340ರ** ವರೆಗಿನ ಪ್ರಾಥಮಿಕ ಶಾಲಾ ಶಿಕ್ಷಕರು (ನಾಲ್ಕು ವಿಭಾಗಗಳು ಸೇರಿ) (ಕೌನ್ಸಿಲಿಂಗ್‌ಗೆ ಆಯ್ಕೆ ಮಾಡಿಕೊಂಡಿರುವ ಸ್ಥಳದಲ್ಲಿಯೇ ಅಭ್ಯರ್ಥಿಗಳು ಹಾಜರಾಗತಕ್ಕದ್ದು) |
| | | | **1 ರಿಂದ 86ರ** ವರೆಗಿನ ಪ್ರಾಥಮಿಕ ಶಾಲಾ ಶಿಕ್ಷಕರ **ಪರಸ್ಪರ ವರ್ಗಾವಣೆ** (ನಾಲ್ಕು ವಿಭಾಗಗಳು ಸೇರಿ) (ಕೌನ್ಸಿಲಿಂಗ್‌ಗೆ ಆಯ್ಕೆ ಮಾಡಿಕೊಂಡಿರುವ ಸ್ಥಳದಲ್ಲಿಯೇ ಅಭ್ಯರ್ಥಿಗಳು ಹಾಜರಾಗತಕ್ಕದ್ದು) |

**ವರ್ಗಾವಣೆ ಪ್ರಕ್ರಿಯೆಗಳು ಪೂರ್ಣಗೊಂಡ ನಂತರ ಅಂಕಿ-ಅಂಶ ಸಹಿತ ಮತ್ತು ಕೌನ್ಸಿಲಿಂಗ್ ಸಂದರ್ಭದಲ್ಲಿ ವಿಶೇಷ ಘಟನಾವಳಿಗಳಿದ್ದಲ್ಲಿ ಸಹ ವರದಿಯಲ್ಲಿ ಉಲ್ಲೇಖಿಸಿ ಸಮಗ್ರ ವರದಿಯನ್ನು ಸಲ್ಲಿಸುವುದು.**

ನಿರ್ದೇಶಕರು(ಪ್ರಾಥಮಿಕ ಶಿಕ್ಷಣ)

ಗೆ,

ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಸಹನಿರ್ದೇಶಕರು ಹಾಗೂ ಪದನಿಮಿತ್ತ ವಿಭಾಗೀಯ ಕಾರ್ಯದರ್ಶಿಗಳು.

<u>ಪ್ರತಿ</u>

1. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಗುಲ್ಬರ್ಗ/ಧಾರವಾಡ.
2. ರಾಜ್ಯದ ಎಲ್ಲಾ ಉಪನಿರ್ದೇಶಕರು ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ ರವರಿಗೆ ಅಗತ್ಯ ಕ್ರಮಕ್ಕಾಗಿ.
3. ಹಿರಿಯ ಸಹಾಯಕ ನಿರ್ದೇಶಕರು, ಇ–ಆಡಳಿತ ವಿಭಾಗ, ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ – ಇಲಾಖಾ ವೆಬ್‌ಸೈಟ್‌ನಲ್ಲಿ ವೇಳಾಪಟ್ಟಿಯನ್ನು ಪ್ರಕಟಿಸಲು ಮತ್ತು ಕೌನ್ಸಿಲಿಂಗ್ ದಿನಾಂಕಗಳಲ್ಲಿ ಶಿಕ್ಷಕರ ಸದನದಲ್ಲಿ ನಡೆಯುವ ಕೌನ್ಸಿಲಿಂಗ್‌ಗಾಗಿ ತಾಂತ್ರಿಕ ಸಹಕಾರ ಒದಗಿಸಲು ಪ್ರಾಧಿಕಾರಿಯವರು ಕೋರುವ ಸಂಖ್ಯೆಗೆ ಅನುಗುಣವಾಗಿ ಸರದಿ ಆಧಾರದ ಮೇಲೆ ಬೆಂಗಳೂರು ಉತ್ತರ ಮತ್ತು ದಕ್ಷಿಣ ಜಿಲ್ಲೆಯ ಪ್ರೋಗ್ರಾಮರ್‌ಗಳನ್ನು ನಿಯೋಜಿಸಲು ಅಗತ್ಯ ಕ್ರಮಕ್ಕಾಗಿ.